

# ಕಥೋಪದೇಶ

## ಚಿನ್ನ ಎಷ್ಟು ಚೆನ್ನ?

ಒಂದು ಊರಿನಲ್ಲಿ ಒಬ್ಬ ರಾಜ ನಿದ್ದನು. ಆತನಿಗೆ ಚಿನ್ನದ ಮೇಲೆ ಅತ್ಯಂತ ವ್ಯಾಮೋಹ. ಚಿನ್ನವನ್ನು ನೋಡಿ ಮೈಮರೆಯುತ್ತಿದ್ದನು. ಚಿನ್ನವೇ ಅವನ ಪ್ರಾಣದಂತಾಗಿಬಿಟ್ಟಿತ್ತು. ಎಲ್ಲೆಲ್ಲಿ ಚಿನ್ನ ಸಿಕ್ಕಿದರೂ ಬಿಡದೆ ತಂದು ಸಂಗ್ರ ಹಿಸುತ್ತಿದ್ದ.

ಒಂದು ದಿನ ಅವನು ಒಬ್ಬ ಸಾಧು ವಿನ ಆಶ್ರಮಕ್ಕೆ ಹೋದನು. ಸಾಧುವಿನ ಮುಖದಲ್ಲಿ ತೇಜಸ್ಸು ಹೊರಹೊಮ್ಮು ತ್ತಿತ್ತು. ರಾಜನು ಸಾಧುವಿಗೆ ರಾಜೋಚಿತವಾದ ಉಡು ಗೊರೆಗಳನ್ನು ಕೊಟ್ಟು, ಗೌರವ ತೋರಿದನು.

ರಾಜನ ಶ್ರದ್ಧಾಭಕ್ತಿಯಿಂದ ಸುಪ್ರೀತನಾದ ಸಾಧುವು ಅವನಿಗೊಂದು ವರವನ್ನು ಕರುಣಿಸುವುದಾಗಿ ಹೇಳಿದನು. ರಾಜನು ಕೂಡಲೇ ತನ್ನ ಅಂತರಂಗದ ಹಂಬಲವನ್ನು ವ್ಯಕ್ತ ಪಡಿಸಿದನು : "ಮಹಾಸ್ವಾಮಿ, ನನಗಿನ್ನೇನೂ ಬೇಡ. ನನಗೆ ಬೇಕಾದಷ್ಟು ಚಿನ್ನ ಬೇಕು. ಎಲ್ಲ ಕಡೆಯಿಂದಲೂ ನನಗೆ ಚಿನ್ನ ಬಂದು ಸೇರುವಂತೆ ನನಗೆ ಅನುಗ್ರಹಿಸಿ. ಇಲ್ಲವೇ ನನಗೆ ಸ್ಪರ್ಶಮಣಿ ದೊರೆಯು ವಂತೆ ಮಾಡಿ."

ಸಾಧುವು ಹೇಳಿದ: "ನೋಡು, ನಾನು ನಿನಗೆ ಒಂದು ಶಕ್ತಿಯನ್ನು ಕರುಣಿಸುತ್ತೇನೆ. ನಿನಗೆ ಒಂದು ಮಂತ್ರವನ್ನು ಹೇಳಿಕೊಡು ತ್ತೇನೆ. ಆ ಮಂತ್ರ ಉಚ್ಚರಿಸಿ ನೀನು ಏನು ಮುಟ್ಟಿದರೂ ಚಿನ್ನವಾಗಿಬಿಡುತ್ತದೆ. ನಿನ್ನ ಹಸ್ತವೇ ಸ್ಪರ್ಶಮಣಿಯಂತಾಗಿಬಿಡುತ್ತದೆ."

ರಾಜನಿಗೆ ಸಾಧುವಿನ ಮಾತನ್ನು ಕೇಳಿ ಪರಮಾನಂದವಾಯಿತು. ಮತ್ತೆ ಮತ್ತೆ ಸಾಧುವಿಗೆ ವಂದಿಸಿದ. ಸಾಧುವಿನ ಆಶ್ರಮದಿಂದ ಅರಮನೆಗೆ ತೆರಳಿದನು.

ರಾಜನ ಆನಂದಕ್ಕೆ ಈಗ ಪಾರವೇ ಇಲ್ಲ. ಕುಣಿಯುವಷ್ಟು ಆನಂದ. ಕೂಡಲೇ ತಾನು ಪಡೆದ ಶಕ್ತಿಯನ್ನು ಪ್ರಯೋಗಿಸ ಬೇಕೆಂಬ ಆತುರ. ಅರಮನೆಗೆ ಹೋದ ಒಡನೆ ಮನಸ್ಸಿನಲ್ಲೇ ಮಂತ್ರವನ್ನು ಉಚ್ಚರಿಸುತ್ತ ಒಂದು ಕಂಬವನ್ನು ಮುಟ್ಟಿದನು. ಅದು ಕೂಡಲೆ ಚಿನ್ನವಾಗಿ ಥಳಥಳನೆ ಹೊಳೆಯತೊಡಗಿತು.



ಆನಂದದಿಂದ ಕುಣಿದು ಕುಪ್ಪಳಿಸಿದ. ಎಲ್ಲ ಕಂಬಗಳನ್ನೂ ಮುಟ್ಟಿದ –ಎಲ್ಲ ಚಿನ್ನ. ಗೋಡೆಯನ್ನು ಮುಟ್ಟಿದ. ಅದೂ ಚಿನ್ನವಾಯಿತು. ಅವನಿಗೆ ಹುಚ್ಚು ಹಿಡಿಯುವಷ್ಟು ಆನಂದವುಂಟಾಯಿತು.



ಅನಂತರ ಅವನು ತನ್ನ ಸಿಂಹಾಸನವನ್ನು ಸ್ಪರ್ಶಿಸಿದ. ಅದರ ಮೆತ್ತೆಯೂ ಸೇರಿದಂತೆ ಎಲ್ಲ ಚಿನ್ನವಾಯಿತು. ರಾಜನು ಅದರ ಮೇಲೆ ಕುಳಿತುಕೊಂಡಾಗ ಅದು ಕಠಿನವಾಗಿತ್ತು. ಈಗ ಅವನ ಮನಸ್ಸಿಗೆ ಸ್ವಲ್ಪ ಕಸಿವಿಸಿಯಾಯಿತು. ಅವನು ಹೋಗಿ ತನ್ನ ಸುಪ್ಪತ್ತಿಗೆಯನ್ನು ಸ್ಪರ್ಶಿಸಿದ. ಅದೂ ಸಂಪೂರ್ಣ ಚಿನ್ನವಾಯಿತು. ಈಗ ಅದರ ಮೇಲೆ ಮಲಗಿಕೊಂಡರೆ ಕಲ್ಲಿನಮೇಲೆ ಮಲಗಿಕೊಂಡಂತೆ ಅವನಿಗೆ ಅನುಭವವಾಯಿತು.

ಅವನ ಆನಂದಗೋಪುರ ಈಗ ಕುಸಿಯತೊಡಗಿತು. ಊಟ ಮಾಡೋಣವೆಂದು ಅವನು ತನ್ನ ಭೋಜನಶಾಲೆಗೆ ಹೋದ. ಮೃಷ್ಟಾನ್ನ ಭೋಜನ ಅವನ ಮುಂದೆ ಇರಿಸಲಾಯಿತು. ಊಟ ಮಾಡಲು ತಟ್ಟೆಯನ್ನು ಮುಟ್ಟುತ್ತಿದ್ದಂತೆಯೆ ಮಂತ್ರವೂ ಮನಸ್ಸಿಗೆ ಬಂದುಬಿಟ್ಟಿತು. ತಟ್ಟೆ ಚಿನ್ನವಾಯಿತು. ಹಾಗೆಯೆ ಅವನು ಊಟ ಪ್ರಾರಂಭಿಸುತ್ತಿದ್ದಂತೆ ಬಡಿಸಿದ್ದ ಭಕ್ಷ್ಯಗಳೆಲ್ಲವೂ ಚಿನ್ನವಾದವು. ಈಗ ತಿನ್ನುವುದೇನನ್ನು?

ಅವನ ಆನಂದ ದುಃಖವಾಗಿ ಪರಿಣಮಿಸಿತು. ಮಂತ್ರ ಅವನನ್ನು ಭೂತದಂತೆ ಕಾಡತೊಡಗಿತು. ಸದಾ ಅವನ ಮನಸ್ಸಿನಲ್ಲಿ ಇರುತ್ತಿತ್ತು. ಹೀಗೆ ದುಃಖದಿಂದ ಸಂಕಟಪಡುತ್ತಿರುವಾಗ ಅವನ ಮಗಳು ಸಮೀಪಕ್ಕೆ ಬಂದಳು. ತಾನು ಅತ್ಯಂತ ಪ್ರೀತಿಸುತ್ತಿದ್ದ ಅವಳನ್ನು ದುಃಖಿತಪ್ತ ಮನಸ್ಸಿನೊಂದಿಗೆ ಎತ್ತಿಕೊಂಡನು. ಕೂಡಲೆ ಮಗಳು ಒಂದು ಸುಂದರ ಚಿನ್ನದ ಪುತ್ಥಳಿಯಾಗಿ ಪರಿಣಮಿಸಿದಳು.



ಈಗ ರಾಜನ ದುಃಖಕ್ಕೆ ಕೊನೆಯುಂಟೇ? ಅವನಿಗೆ ಏನು ಮಾಡುವುದೆಂದು ತೋಚಲಿಲ್ಲ. ಹೀಗೆ ಪರಿತಪಿಸುತ್ತಿರುವಾಗ ಸಾಧುವು ಅರಮನೆಗೇ ಬಂದನು. ಅವನ ಪಾದಕ್ಕೆ ಸಾಷ್ಟಾಂಗ ಎರಗಿ ಅವನು ಕೊಟ್ಟ ಮಂತ್ರವನ್ನು ಅವನಿಗೆ ಹಿಂದಿರುಗಿಸಿದನು. ಸಾಧುವು ಮುಗುಳ್ನಗುತ್ತ ಅದನ್ನು ಸ್ವೀಕರಿಸಿದನು. ಕೂಡಲೇ ರಾಜನ ಮನಸ್ಸಿನಿಂದ ಮಂತ್ರ ಮಾಯವಾಯಿತು.

**ಚಿನ್ನಕ್ಕಿಂತ**
**ಮಾನವೀಯ ಸಂಬಂಧ ಮುಖ್ಯ.**

ಕಲೆ : ಜೆ.ಸಿ. ಸಿದ್ದಲಿಂಗಯ್ಯ